ದಿನಾಂಕ 14 ನೇ ಜೂನ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರಿದ ಪಾಟೀ ಸವಾಲು :</u> ಆರೋಪಿ ಪರ ವಕೀಲರಿಂದಃ-

ಕರ್ನಾಟಕ ಬ್ಯಾಂಕ್ ಕಾರ್ಮಾಡು ಶಾಖೆಯಲ್ಲಿ ನಾನು ಸಾಲ ಪಡೆದು ನನ್ನ ವಿರುದ್ಧ ದಾವೆ ಹೂಡಿ ಡಿಕ್ರಿ ಅಗಿದೆ ಎಂದರೆ ಸಾಲತೀರಿಸಿದ್ದೇನೆ ಎನ್ನುತ್ತಾರೆ. ಸದರಿ ಡಿಕ್ರಿಗೆ ಸಂಬಂಧಿಸಿದಂತೆ FDP 1/2020 ಈಗಲೂ ಬಾಕಿ ಇದೆ ಎಂದರೆ ಸರಿಯಲ್ಲ. ಲೋಕ ಆದಲಾತ್ ನಲ್ಲಿ FDP 1/2020 ರಾಜಿ ಆಗಿದೆ ಎನ್ನುತ್ತಾರೆ. ಸದರಿ ಕರ್ನಾಟಕ ಬ್ಯಾಂಕ್ ನಲ್ಲಿ ಸಾಲ ಯಾವ ವರ್ಷ ಪಡೆದಿದ್ದೆ ಎಂದು ನನಗೆ ನೆನಪಿಲ್ಲ. ಹರಿಶ್ಚಂದ್ರಪುರದಲ್ಲಿ ವಾಸವಿರುವ ಮುಜೀಬ್ ಸಾಬ್‌ರವರ ನಿವೇಶನವನ್ನು ಖರೀದಿಸಲು ಪರಮೇಶ್ ಮತ್ತು ಬೋಪಣ್ಣ ಪ್ರಯತ್ನಿಸಿದಾಗ ಆರೋಪಿ ಮಧ್ಯಸ್ಥಿಕೆ ವಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಆರೋಪಿ ಒಂದು ಚೆಕ್ ಅನ್ನು ಭದ್ರತೆಗಾಗಿ ಪರಮೇಶ್ ಮತ್ತು ಬೋಪಣ್ಣರವರು ಪಡೆದಿದ್ದರು ಎಂದರೆ ಸರಿಯಲ್ಲ. ಆನಂತರ ಸದರಿ ನಿವೇಶನವನ್ನು ಮುಜೀಬ್ ಸಾಬ್‌ರವರು ಬೇರೆಯವರಿಗೆ ಮಾರಾಟ ಮಾಡಿದರು ಎಂಬ ಕಾರಣದಿಂದ ಪರಮೇಶ್ ಮತ್ತು ಬೋಪಣ್ಣ ಚೆಕ್ ಅನ್ನು ನನಗೆ ನೀಡಿ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

ಆರೋಪಿಯ ಮಂಗಳೂರು ವಿಳಾಸವನ್ನು ನಾನು ಬೇರೆಯವರ ಕಡೆಯಿಂದ ತಿಳಿದುಕೊಂಡಿದ್ದೇನೆ ಅವರ ಹೆಸರು ಗೊತ್ತಿಲ್ಲ. ಆರೋಪಿ ಆಗ ಕೊಡಗಿನಲ್ಲಿ ಇರಲಿಲ್ಲ. ಆರೋಪಿ 2016 ರಿಂದ ಕೊಡಗಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 2019 ರಲ್ಲಿ ಆರೋಪಿಯನ್ನು ಬೇರೆ ಪ್ರಕರಣದಲ್ಲಿ ಹಾಜರುಪಡಿಸಿದಾಗ ಈ ಪ್ರಕರಣದ ಸಮನ್ಸ್ ಜಾರಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ನಿ ಪಿ 1 ರಲ್ಲಿ ಇರುವ ಬರವಣಿಗೆ ಹಾಗೂ ಸಹಿ ಬೇರೆ ಬೇರೆ ರೀತಿ ಇದೆ ಎಂದರೆ ಆರೋಪಿ ಚೆಕ್ ಅನ್ನು ಮೊದಲೇ ಬರೆದುಕೊಂಡು ಬಂದಿದ್ದರು ನನ್ನ ಮುಂದೆ ಸಹಿ ಮಾಡಿದರು ಎನ್ನುತ್ತಾರೆ. ನಮ್ಮ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾವು ಕರಾರು ಮಾಡಿಕೊಂಡಿರುವುದಿಲ್ಲ ಆದರೆ ಮಾತುಕತೆ ಆಗಿತ್ತು ಅದರಂತೆ ಚೆಕ್ ಬರೆದುಕೊಂಡು ಬಂದಿರುತ್ತಾರೆ. ನಾನು ಕಾಫಿ ಮತ್ತು ಮೆಣಸು ಆರೋಪಿಗೆ ನೀಡಿದ ಬಗ್ಗೆ ನನಗೆ ರಶೀದಿ ನೀಡಿರುವುದಿಲ್ಲ. ನಾನು ನೋಟೀಸ್ ಕಳುಹಿಸಿದ ಆರೋಪಿ ಯಾವತ್ತೂ

ವಾಸವಿರಲಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ದೂರು ಮತ್ತು ನೋಟೀಸ್ ನಲ್ಲಿ ಆರೋಪಿ ತಂದೆಯ ಹೆಸರು ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ ಹಾಗಾಗಿ ನಮೂದಿಸಲಿಲ್ಲ ಎನ್ನುತ್ತಾರೆ. ಆರೋಪಿ ಯಾವತ್ತೂ ಕಾಫಿ ಹಾಗೂ ಮೆಣಸು ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಯಾವುದೇ ಅಂಗಡಿ ಇರಲಿಲ್ಲ  ಎಂದರೆ ಸರಿಯಲ್ಲ. ಆರೋಪಿ ಹಾಗೂ ನನ್ನ ನಡುವಿನ ಹಿಂದಿನ  ಕಾಫಿ ಹಾಗೂ ಮೆಣಸು ವ್ಯವಹಾರದಲ್ಲಿ ಆರೋಪಿ ಹಣವನ್ನು ನಗದಾಗಿ ನೀಡಿರುತ್ತಾರೆ ಬ್ಯಾಂಕ್ ಗೆ ವರ್ಗಾಯಿಸಿರುವುದಿಲ್ಲ ಎನ್ನುತ್ತಾರೆ. ನಾನು ಹಣವನ್ನು ಬ್ಯಾಂಕ್ ಗೆ ಹಾಕುತ್ತಿರಲಿಲ್ಲ, ಮನೆಯಲ್ಲಿ ಇಡುತ್ತಿದ್ದೆ ಬೇಕಾದಾಗ ಖರ್ಚಿಗೆ ತೆಗೆದುಕೊಳ್ಳುತ್ತಿದ್ದೆ ಎನ್ನುತ್ತಾರೆ. ನಾನೇ ಚೆಕ್ ಅನ್ನು ಭರ್ತಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚೆಕ್ ಅನ್ನು ದುರ್ಬಳಕೆ ಮಾಡಿಕೊಂಡು ನನಗೆ ಬೇಕಾದಷ್ಟು ಹಣ ಬರೆದುಕೊಂಡು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯಕ್ಕೂ, ಆರೋಪಿಗೂ , ಈ ಪ್ರಕರಣಕ್ಕೂ ಯವೂದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನನಗೆ ಯಾವುದೇ ಹಣ ನೀಡಲು ಬಾಧ ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.